Sri S. BANGARAPPA.—May I know whether the Government has decided to extend the time by the end of December ?

Sri D. DEVARAJ URS.—We are anyway bringing the Bill. Let the hon. Members discuss it.

Report of the Committee on Private Members Bills and Resolutions Presentation

Sri G. C. PATIL (Kalaghatgi).—I present the Twenty-first report of the Committee on Private Members' Bills and Resolutions.

Sri P. A. PAWASHE.—I move.

"That the House agrees with the report."

Mr. DEPUTY SPEAKER.—The question is :

"That the Assembly agrees with the Twenty-first Report of the Committee on Private Members' Bills and Resolutions."

The motion was adopted.

Statement of the Minister of State for Health

re : 'X'ray plant of Thirthahalli Hospital, Shimoga District

ಶ್ರೀ ಕೋಣಂಡೂರು ಲಿಂಗಪ್ಪ.—ಮಾನ್ಯ ಆರೋಗ್ಯ ಸಚಿವರು ನಮ್ಮ ತೀರ್ಥಹಳ್ಳಿ ತಾಲ್ಲೂಕಿಗೆ ಬಂದಾಗ ಎಕ್ಸ್‌ರೇ ಯಂತ್ರವನ್ನು ನಮ್ಮ ತಾಲ್ಲೂಕಿನ ಜನರಿಗೆ ಅನುಕೂಲವಾಗಲು ಕೊಡಲಾಗುತ್ತದೆಂದು ಭರವಸೆ ಕೊಟ್ಟು ಬಂದಿದ್ದಾರೆ. ಬರವಸೆ ಬಂದಿದೆ. ಅದನ್ನು ಇನ್ನೂ ಕೊಟ್ಟಿಲ್ಲ. ಅದರ ಬಗ್ಗೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತೇನೆಂದೂ ಹೇಳಿರುವುದರಿಂದ, ದಯವಿಟ್ಟು ಒಂದು ಹೇಳಿಕೆಯನ್ನು ಇವತ್ತು ಈ ಸಭೆಯಲ್ಲಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Sri DEVENDRAPPA GHALAPPA (Minister of State for Health) .—

The X-Ray Machine of J. C. Hospital, Thirthahally has been purchased more than 15 years ago. So far it has been repaired 4 times at a total cost of Rs. 12,934-00. In spite of it the plant has not satisfactorily served for a minimum period required after each repair. The firm will not give guarantee of satisfactory working as this model is obsolute and the spares are not available.

The firm has also reported that inspecting the plant and submitting estimate for repairs or replacement will depend upon the availability of spare parts. The plant at present is out of order from 26th September 1972.

17 X-Ray plants have been purchased during 1973-74 for various institutions in the State out of the anticipated savings at the end of the financial year 1973-74 and all have been distributed to different Institutions. Arrangements are being made to purchase X-Ray plants during 1974-75 subject to availability of funds. After this purchase materializes, one X-Ray plant can be made available to J. C. Hospital, Thirthahalli.

However, efforts will be made to supply one X-Ray plant out of the 17 purchased during 1973-74, if any of the institutions does not need it immediately.

10-00 A.M.

ಶ್ರೀ ಎಚ್. ಸಿದ್ದವೀರಪ್ಪ.—ಎಕ್ಸರೇ ಯಂತ್ರಗಳು ಕೆಲವು ಕಡೆ ರಿಪೇರಿ ಮಾಡಲು ಆಯಾ ಕಂಪನಿಗಳವರಿಗೆ ಬರೆಯಲಾಗಿದೆ. ಅವರ ಮೂಲಕ ಇವನ್ನು ರಿಪೇರಿ ಮಾಡಿಸಲು ಪ್ರಯತ್ನ ಮಾಡುತ್ತೇನೆ. ಹೊಸದಾಗಿ ಬರುವ ಎಕ್ಸ್‌ರೇ ಯಂತ್ರಗಳಲ್ಲಿ ಚಿಕ್ಕಮಗಳೂರಿಗೆ ಒಂದನ್ನು ಕಳುಹಿಸಲು ಹೇಳುತ್ತೇನೆ ಮತ್ತು ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪನವರು ಕೇಳಿದಂತೆ ತೀರ್ಥಹಳ್ಳಿಗೂ ಆದಷ್ಟು ಜಾಗ್ರತೆ ಕಳುಹಿಸುವ ಏರ್ಪಾಡು ಮಾಡುತ್ತೇವೆ. ಇಂತಹ ಎಕ್ಸ್‌ರೇ ಯಂತ್ರಗಳನ್ನು ನೂಪರುಪೈಸು ಮಾಡಲು ಒಬ್ಬರ ಚೆಕ್ನಿಕಲ್ ಇಂಜನೀಯರನ್ನೇ ನೇಮಕ ಮಾಡಿದ್ದೇವೆ. ಅವರು ಎಲ್ಲ ಕಡೆಗಳಲ್ಲೂ ಇರುವ ಎಕ್ಸ್‌ರೇ ಯಂತ್ರಗಳನ್ನು ಹೋಗಿ ನೋಡಿ ಇವುಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎನ್ನುವುದನ್ನೂ ಸರಕಾರಕ್ಕೆ ತಿಳಿಸುತ್ತಾರೆ. ಇದರ ಮೇರೆ ಬೇಗ ತಕ್ಕ ಕ್ರಮ ತೆಗೆದುಕೊಳ್ಳಲೂ ಸಹಾಯವಾಗುತ್ತದೆ ಎಂದು ಯೋಚನೆ ಮಾಡಿದ್ದೇವೆ.

NOTICE OF A QUESTION OF PRIVILEGE

re ; Affairs at the Bangalore University

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಒಂದು ಗಹನವಾದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಕಳೆದ ಕೆಲವು ದಿನಗಳ ಹಿಂದೆ ನಾನು ಈ ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮೊನ್ನೆ ದಿವಸ ಎಂದರೆ 22-8-1974ರಂದು ಶ್ರೀ ಮೋಹನರಂಗಂ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಪ್ರಜಾವಾಣಿಯ 22-8-1974ನೇ ಪತ್ರಿಕೆಯಲ್ಲಿದೆ. ಇದರಲ್ಲಿ ಅವರು ಹೇಳುವಂತೆ ಈ ಸಭೆಯ ಕಾರ್ಯಕಲಾಪಗಳ ಬಗ್ಗೆ ಒಂದು ರೀತಿಯಾಗಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಅವರು ಹೇಳಿರುವುದು.

> "ಕೀರ್ತಿಗೆ ಧಕ್ಕೆ-ವಿಧಾನ ಮಂಡಲದಲ್ಲಿ ಮಾಡಲಾದ ಅಪಾದನೆಗಳು ತೀವ್ರತರವಾಗಿದ್ದು ತಮ್ಮ ಕೀರ್ತಿಗೆ ಧಕ್ಕೆ ತರುವಂತಾದ್ದರಿಂದ ಸರಕಾರ ಇಡೀ ಪ್ರಕರಣದ ಬಗ್ಗೆ ವಿಚಾರಣೆ ನಡೆಸಬೇಕೆಂದು ಒತ್ತಾಯ ಮಾಡುತ್ತಿರುವುದಾಗಿ ತಿಳಿಸಿದ್ದಾರೆ".

ಇದರ ಬಗ್ಗೆ ಶ್ರೀ ಮೋಹನರಂಗಂರವರು ಇದಕ್ಕೂ ನನಗೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಮತ್ತು ಇದರ ಬಗ್ಗೆ ನಿನ್ನೆ ದಿನದ ಪತ್ರಿಕೆಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್‌ರವರು ಒಂದು ಹೇಳಿಕೆ ಕೊಟ್ಟು ಶ್ರೀ ಮೋಹನರಂಗಂರವರಿಗೂ ಇದಕ್ಕೂ ಸಂಬಂಧವಿದೆ ಎನ್ನುವುದು ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಸರಕಾರದ ಸ್ಪಷ್ಟ ನಿಲುವೇನು ಎನ್ನುವುದನ್ನು ನಾನು ಇಲ್ಲಿ ಸರಕಾರವನ್ನು ಕೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲಿರುವುದರಿಂದ ಇದರ ಬಗ್ಗೆ ಕೇಳಲು ಪ್ರಯತ್ನ ಮಾಡುತ್ತಿದ್ದೇನೆ.